ಮನುಷ್ಯನ ತಪ್ಪಿನಿಂದ, ಅರ್ಥಾತ್ ಅಪ್ಪನ ಸೋಮಾರಿತನದಿಂದ ಹೊರತು ಮಳೆಯಿಂದ ಸಮಸ್ಯೆ ಅಲ್ಲ ಎನ್ನುವುದು ಅವ್ವನಿಗೆ ಗೊತ್ತಿತ್ತು. ಅವರಿವರ ಸಹಾಯದಿಂದ ಮತ್ತೆ ಹೊಸ ಗುಡಿಸಲು ನಿರ್ಮಾಣವಾಯಿತು ಮತ್ತು ಅವ್ವ ಗುರುವಾರ ಸಂತೆಯಲ್ಲಿ ಹೊಸ ಮಡಿಕೆ ಕುಡಿಕೆ ತಂದು ಹಾಲು ಉಕ್ಕಿಸಿತ್ತು. ಗುಡಿಸಲು ಸೋರುವುದು ನಿಂತಿತು. ವಿಶೇಷವಾಗಿ ನನ್ನ ಕಿವಿಗೆ ಮಳೆ ಹನಿ ನೀರು ಬೀಳುವುದು ತಪ್ಪಿತಲ್ಲ ಎನ್ನುವ ಖುಷಿಯಾಯ್ತು. ಹಾಗೆ ಜೋರು ಮಳೆ ಬಂದು ನಿಂತಾಗ ಜಗಲಿಯಲ್ಲಿ ನಿಂತು ಹುಲ್ಲಿನ ತುದಿಯಿಂದ ನಿಂತು ನಿಂತು ಹನಿಯುವ ಆ ತುಂತುರು ಹನಿಗಳನ್ನು ನೋಡುವ ನನ್ನ ಜೀವನದ ಅತ್ಯಂತ ಸುಂದರ ಕ್ಷಣಗಳನ್ನು ನಾನು ಮರೆಯಲಾರೆ. ಆ ಮಳೆ ನಮಗೆ ಒಂದು ಸುಂದರವಾದ ಗುಡಿಸಲನ್ನು ಕಟ್ಟಿಸಿಕೊಟ್ಟಿತು.

ಮಲೆನಾಡಿನಲ್ಲಿ ಸ್ಥಿತಿವಂತರೂ ಕೂಡ ಮಕ್ಕಳಿಗೆ ಛತ್ರಿಯನ್ನು ಕೊಡಿಸುವುದು ಅಪರೂಪ. ಏಕೆಂದರೆ ಆ ಪಾಟಿ ಗಾಳಿ-ಮಳೆಗೆ ಛತ್ರಿಗಳು ಲೆಕ್ಕವಿಲ್ಲ. ಕೆಲವೊಮ್ಮೆ ಮಳೆ ಗಾಳಿ ಎದುರಿಗೆ ಏನಿದೆ ಎಂದು ತಿಳಿಯದಷ್ಟು ಸುರಿಯುತ್ತದೆ. ಮಳೆಗಾಳಿಗೆ ಗೊರಗ ಹೆಚ್ಚು ಸೂಕ್ತ. ಇದನ್ನು ನಮ್ಮ ಕಡೆ ಸಿಗುವ ಬಿದರಿಗಿಂತ ಸ್ವಲ್ಪ ಸಣ್ಣದಾದ ವಾಟೆ ಎನ್ನುವ ಪರಿಕರದಿಂದ ತಯಾರಿಸಲಾಗುತ್ತದೆ. ಇದು ತಲೆಯಿಂದ ಹಿಂಗಾಲಿನ ಮೀನಖಂಡದವರೆಗೆ ದೇಹದ ಬಹುತೇಕ ಹಿಂಬದಿಯನ್ನು ಮಳೆಯಿಂದ ರಕ್ಷಣೆ ಮಾಡುತ್ತದೆ. ಗೊರಗ ಹಾಕಿಕೊಂಡು ತೋಟ, ಗದ್ದೆಯ ಕೆಲಸ ಮಾಡಬಹುದು ಮತ್ತು ಎರಡೂ ಕೈಗಳಿಂದ ಕೊಡ ಹಿಡಿದುಕೊಳ್ಳಬಹುದು. ಕಾಫಿ, ಏಲಕ್ಕಿ ತೋಟಗಳಲ್ಲಿ ಕಂಬಳಿ ಮತ್ತು ಪ್ಲಾಸ್ಟಿಕ್ ಅನ್ನು ಜೋಡಿಸಿ ಗುಮ್ಮಟೆ ಹಾಕಿಕೊಳ್ಳುತ್ತಿದ್ದೆವು. ಹಾಗೆ ಮಳೆಗಾಲದಲ್ಲಿ ನಮ್ಮೂರಿಗೆ ದೂರದ ಹಳ್ಳಿಯಿಂದ ಬರುವ ಎಲ್ಲಾ ಮಕ್ಕಳು ಈ ಗೊರಗವನ್ನು ಹಾಕಿಕೊಂಡು ಬರುತ್ತಿದ್ದವು. ರೈನ್ ಕೋಟ್ ಬಳಸುತ್ತಿದ್ದದ್ದು ಬಹಳ ಅಪರೂಪ. ನನಗೆ ನಮ್ಮ ಅವ್ವ ಈ ಗೊರಗವನ್ನು ಮಾಡಿಸಿಕೊಟ್ಟಿತ್ತು. ನನಗೆ ಸ್ವಲ್ಪ ಮರೆವು. ಶಾಲೆ ಬಿಟ್ಟ ತಕ್ಷಣ ಎಲ್ಲರಿಗಿಂತ ಮೊದಲೇ ಓಡಬೇಕೆಂಬ ಆತುರದಲ್ಲಿ ಗೊರಗ ಮರೆತು ಹೋಗುತ್ತಿದ್ದೆ. ಮನೆಗೆ ಹೋದ ತಕ್ಷಣ ನೆನಪಾಗಿ ತಿರುಗಿ ಬಂದು ನೋಡಿದರೆ ಗೊರಗ ಇರುತ್ತಿರಲಿಲ್ಲ. ಹೀಗೆ ಎರಡು ಮೂರು ಬಾರಿ ಕಳೆದುಕೊಂಡ ಮೇಲೆ ಅವ್ವನಿಗೆ ಸಿಟ್ಟು ಬಂದು, 'ಇನ್ನು ಮೇಲೆ ಗೊರಗ ಮಾಡಿಸಿ ಕೊಡುವುದಿಲ್ಲ. ಬೇಕಾದರೆ ಗೋಣಿಚೀಲದ ಗುಮ್ಮಟೆ ಹಾಕಿಕೊಂಡು ತಿರುಗಾಡು' ಎಂದು ಬೈದಿತ್ತು. ಒಂದು ಸಣ್ಣ ಮಕ್ಕಳ ಗೊರಗ ಮಾಡಿಸಲು ಮೂರು ರೂಪಾಯಿ ಆಗುತ್ತದೆ. 'ಹೊಟ್ಟೆಗೆ ಏನು ತಿನ್ನುತ್ತೀಯ... ಓದ್ತಾನಂತೆ ಓದ್ತಾನೆ... ಅಕ್ಷರ ಕಲಿಯುವ ಮಕ್ಕಳು ಹೆಂಗ್ ಚುರುಕಾಗಿರ್ತವೆ. ಎಲ್ಲವನ್ನು ಮರೆತು ಬರ್ತಾನೆ. ನಿನ್ನ ತಲೆಯಲ್ಲಿ ಏನ್ ತುಂಬಿಕೊಂಡಿದ್ದಿಯಾ?' ಇನ್ನೂ ಏನೇನೊ ಬೈಗುಳಗಳು ಸುರಿಯುವ ಮಳೆಯಲ್ಲಿ ಅರ್ಥಂಬರ್ಥಾ ಕೇಳಿಸುತ್ತಿದ್ದವು.

ಹೀಗೆ ಎರಡೋ ಮೂರೋ ಗೊರಗ ಕಳೆದುಕೊಂಡ ಮೇಲೆ ನನ್ನ ಹರಿದ ಬ್ಯಾಗು, ಸ್ಲೇಟು, ಪುಸ್ತಕಗಳನ್ನು ತಲೆಯ ಮೇಲೆ ಹಿಡಕೊಂಡು ಓಡಿ ಬರುತ್ತಿದ್ದುದನ್ನು ನೋಡಿದ ಅವ್ವ ನನ್ನ ಕೆನ್ನೆಗೆ ತಿವಿದು, 'ಬ್ಯಾಗನ್ನು ತಲೆಯ ಮೇಲೆ ಇಟ್ಟುಕೊಂಡು ಬರುತ್ತೀಯಲ್ಲ, ಅದು ನೆನೆಯುತ್ತೆ ಅಂತ ಗ್ಯಾನ ಇಲ್ವಾ? ಏನು ಓದಿ ಉದ್ಧಾರ ಆಗುತ್ತಿಯೊ ನಾ ಕಾಣೆ' ಎನ್ನುವ ಗೊಣಗಾಟ ಮಳೆಯಂತೆ ಕೇಳಿಸುತ್ತಿತ್ತು.

ಮಳೆಯ ವೈಭವವನ್ನು ಅನುಭವಿಸಬೇಕು. ಮಳೆಯನ್ನು ದೂಷಿಸುವುದು ಅನಗತ್ಯ. ಮನುಷ್ಯನ ಅನುಕೂಲಕ್ಕೆ ಪ್ರಕೃತಿ ಎಂದೂ ರಾಜಿಯಾಗುವುದಿಲ್ಲ. ಪ್ರೈಮರಿ ಶಾಲೆಯಲ್ಲಿ ಕಲಿಯುತ್ತಿದ್ದಾಗ ನಮ್ಮೆಲ್ಲರಿಗೂ ಉಪ್ಪಿಟ್ಟು ಕೊಡುತ್ತಿದ್ದರು. ಇದನ್ನು ಮಿಡಲ್ ಸ್ಕೂಲಿನಲ್ಲಿ ತಯಾರಿಸಿ, ಕಬ್ಬಿಣದ ಬಕೆಟ್‌ನಲ್ಲಿ ತುಂಬಿ ತಂದು ಹಂಚುತ್ತಿದ್ದರು. ಉಪ್ಪಿಟ್ಟನ್ನು ತಯಾರು ಮಾಡುವುದು, ಅದನ್ನು ತಂದು ಬಡಿಸುವುದು ಒಕ್ಕಲಿಗ ಸಮುದಾಯದ ಹುಡುಗರು ಮತ್ತು ಇತರ ಸಮುದಾಯದ ಹುಡುಗರು ಮಾಡುತ್ತಿದ್ದರು. ಉಪ್ಪಿಟ್ಟು ತಿಂದ ಮೇಲೆ ತರಗತಿಯಲ್ಲಿ ನಾವು ಕುಳಿತುಕೊಂಡ ಬೆಂಚನ್ನು ಪಕ್ಕಕ್ಕೆ ಸರಿಸಿ, ಕಸಗುಡಿಸಿ, ಆ ಕಬ್ಬಿಣದ ಬಕೆಟ್ ಅನ್ನು ತೊಳೆದು, ಉಪ್ಪಿಟ್ಟು ಮಾಡುವ ರೂಮಿಗೆ ಇಟ್ಟು ಬರಬೇಕು. ಇದನ್ನು ಎಸ್ಸಿ ಹುಡುಗರು ಮಾತ್ರ ಮಾಡಬೇಕು ಎನ್ನುವುದು ಚಾಲ್ತಿಯಲ್ಲಿತ್ತು. ಇದನ್ನು ಯಾರು ಮಾಡಿದ್ದರು ಗೊತ್ತಿಲ್ಲ, ಅದು ಹಿಂದಿನಿಂದಲೂ ನಡೆದು ಬಂದಿತ್ತು. ಮಳೆಗಾಲದಲ್ಲಿ ನನ್ನ ಸರದಿ ಬಂದಾಗ ನಾನು ತರಗತಿಯನ್ನೆಲ್ಲ ಗುಡಿಸಿ, ಬಕೆಟ್ ಅನ್ನು ತೊಳೆದು